ಆಸಾಮಿಯಿಂದ ಬಂದ ವಸ್ತುಗಳನ್ನೆಲ್ಲಾ ಕೊಳ್ಳುವ ಯೋಚನೆಯಲ್ಲಿ ಸ್ಯಾಮುಯೆಲ್ ಇರಬೇಕು!! ನನ್ನ ಊಹೆ ನಿಜವಾದರೆ, ಆ ವ್ಯಕ್ತಿ ಮಾರಿದ ವಸ್ತುಗಳನ್ನು ಇನ್ನಾರದ್ರೂ ಕೊಂಡಿದ್ರೂ, ಅವರಿಗೂ ಸ್ಯಾಮುಯೆಲ್ ಇದೇ ತರಹದ ಕೊಡುಗೆ ನೀಡೋ ಸಾಧ್ಯತೆಯಿದೆ. ಆದ್ರೆ ಅದು ನಮ್ಗೆ ಗೊತ್ತಾಗೋದು, ಆ ಮನುಷ್ಯನೂ ನಮ್ಮ ಬಳಿಗೆ ಬಂದ್ರೆ ಮಾತ್ರ..."

ಕರಮಚಂದ ಮಾತು ಮುಗಿಸುವುದರೊಳಗೆ, ಕರೆಗಂಟೆ ಸದ್ದು ಮಾಡಿತು. ನಾನು ಕದ ತೆರೆದೆ. ತಂಗರಾಜು ಇನ್ನೊಬ್ಬ ವ್ಯಕ್ತಿಯೊಂದಿಗೆ ನಿಂತಿದ್ದ!

"ಸಾರ್, ಇವ್ರು ನನ್ನ ಮಿತ್ರ, ಕೊಕ್ಕೆಂಗಡ ಪೊನ್ನಪ್ಪ. ನನ್ನಂತೆ ಇವ್ರಿಗೂ ಆಂಟಿಕ್ ಅಂದ್ರೆ ಭಾಳಾ ಆಸಕ್ತಿ. ಮೊನ್ನೆ ಇವ್ರೂ ಕಾವೇರಿ ಎಂಪೋರಿಯಂನಿಂದ ಕೆಲ ವಸ್ತು ಕೊಂಡಿದ್ದರಂತೆ. ನಿನ್ನೆ ಸಂಜೆ ಸ್ಯಾಮುಯೆಲ್ ಅವರಲ್ಲಿಗೆ ಬಂದು, ನನ್ಗೆ ನೀಡಿದಂತೆಯೇ ಈತನಿಗೂ ಕೊಡುಗೆ ನೀಡಿದ್ದನಂತೆ."

ತಂಗರಾಜು ಪೊನ್ನಪ್ಪನನ್ನು ಪರಿಚಯಿಸಿದ.

"ಏನೇನ್ ವಸ್ತುಗಳಿಗೆ ರೇಟು ಹೇಳಿದಾನೆ?" ಕರಮಚಂದ ಕೇಳಿದ.

"ಒಂದು ಗಡಿಯಾರ, ತಾಮ್ರದ ಪಾತ್ರೆಗೆ ಕಮ್ಮಿ ದರ ಹೇಳಿದ್ದಾನೆ. ಪಿಂಗಾಣಿ ಹೂದಾನಿಗೆ ದುಪ್ಪಟ್ಟು ಕ್ರಯ ಹೇಳಿದ್ದಾನೆ. ನಾನು ಕೊಡೋ ಯೋಚ್ನೇಲೆ ಇದ್ದೆ. ಆಗ ತಂಗರಾಜು ಫೋನು ಮಾಡಿದ್ದ. ಹಾಗಾಗಿ ವಿಚಾರ ಗೊತ್ತಾಯ್ತು. ಅದ್ಕೇ ನಾನೂ ನಿಮ್ಮಲ್ಲಿಗೇ ಬಂದಿದೀನಿ."

"ತಂಗರಾಜು, ನೀವು ಒಳ್ಳೇ ಕೆಲ್ಸ ಮಾಡಿದ್ರಿ. ನಿಮ್ಮ ಗುಮಾನಿ ಸರಿಯೆಂದು ನನಗೀಗ ಖಚಿತವಾಗಿದೆ. ಪೊನ್ನಪ್ಪ, ನಿಮ್ ಬಿಲ್ ಕೊಡಿ.''

ಮಧ್ಯಾಹ್ನ ಹನ್ನೊಂದೂವರೆಯ ಹೊತ್ತಿಗೆ ನಾವು ಕಾವೇರಿ ಎಂಪೋರಿಯಂನ ಹವಾ ನಿಯಂತ್ರಿತ ಮಳಿಗೆಯಲ್ಲಿದ್ದೆವು. ವಿಶಾಲವಾದ ಹಜಾರದ ತುಂಬಾ ಬಗೆ ಬಗೆಯ ಕಲಾಕೃತಿಗಳನ್ನು ಒಪ್ಪವಾಗಿ ಜೋಡಿಸಿಡಲಾಗಿತ್ತು. ನಾಲ್ಕಾರು ಮಾರಾಟದ ಹುಡುಗರು ಗಿರಾಕಿಗಳೊಂದಿಗೆ ಮಾತಿನಲ್ಲಿ ತಲ್ಲೀನರಾಗಿದ್ದರು. ನಾವು ನೇರವಾಗಿ ನಿರ್ವಾಹಕನ ಬಳಿ ಹೋದೆವು. ತಿಮ್ಮಯ್ಯ ಅನ್ನೋ ಚಿನ್ನದ ರಂಗಿನ ಫಲಕ ಮೇಜಿನ ಮೇಲೆ ಹೊಳೆಯುತ್ತಿತ್ತು. ನಮ್ಮನ್ನು ಕಂಡು ಅವನು ಮೊಗದಲ್ಲಿ ನಗೆ ಲೇಪಿಸಿಕೊಂಡ.

ತನ್ನನ್ನು ಪರಿಚಯಿಸಿಕೊಂಡ ಕರಮಚಂದ, ಜೇಬಿನಿಂದ ಬಿಲ್ ತೆಗೆದು ತೋರಿಸಿ, ಯಾರಾದರೂ ಈ ವಸ್ತುಗಳ ಬಗ್ಗೆ ವಿಚಾರಿಸಿಕೊಂಡು ಬಂದಿದ್ರೇ ಅಂತ ಕೇಳಿದ. ತಿಮ್ಮಯ್ಯನ ಮೋರೆಯ ಬಣ್ಣ ಗೋಚರಿಸುವಷ್ಟು ಬದಲಾಯಿತು. ಆದರೂ ಯಾರೂ ಬಂದಿಲ್ಲ ಎಂದು ಖಡಕ್ಕಾಗಿ ಆತ ಉತ್ತರಿಸಿದ.

"ನನ್ನ ಕಕ್ಷಿಗಾರ ನಿಮ್ಮಲ್ಲಿಂದ ಖರೀದಿ ಮಾಡ್ದ ವಸ್ತುವೊಂದರಲ್ಲಿ ಒಂದು ಸೂಕ್ಷ್ಮವಾದ ಕಾಗದಪತ್ರವೊಂದು ದೊರಕಿದೆ. ನನ್ನ ಎಣಿಕೆಯಂತೆ, ಅದು ತುಂಬಾ ಮಹತ್ವದ ಪತ್ರ. ಅದನ್ನ ಹಿಂದಿರುಗಿಸೋದು ನಮ್ಮ ಕರ್ತವ್ಯ. ಏನ್ ಮಾಡ್ಬೇಕೂಂತ ಕಕ್ಷಿಗಾರ ನನ್ನ ಬಳಿ ಬಂದಿದ್ದ. ನೀವು ಸಹಕರಿಸಿದ್ರೆ ಚೆನ್ನಾಗಿತ್ತು, ಇಲ್ದೇ ಇದ್ರೆ, ಅವ್ನು ಪೊಲೀಸ್ ಹತ್ರ ಹೋಗ್ಬೇಕಾಗುತ್ತೆ. ಯಾಕಂದ್ರೆ ವಿಷ್ಯ ತುಂಬಾ ಗಂಭೀರವಾದದ್ದು. ಪೊಲೀಸ್ ಅಂದ್ರೆ ಸುಮ್ನೆ ಎಲ್ಲರಿಗೂ ತೊಂದ್ರೆ." ಸಲೀಸಾಗಿ ಸುಳ್ಳು ನುಡಿದ ಕರಮಚಂದ.

ಕರಮಚಂದನ ಮಾತಿನ ವರಸೆಗೆ ಆತ ಮೆತ್ತಗಾದ. ತಿಮ್ಮಯ್ಯ ನಮ್ಗೆ ಉಪಯುಕ್ತ ವಿವರಗಳನ್ನು ಕೊಡಮಾಡಿದ. ಚಿಕ್ಕಪೇಟೆಯ ನಿವಾಸಿ ಚಾರ್ಲಿ ಅನ್ನುವವನೊಬ್ಬ ಎರಡು ವಾರಗಳ ಹಿಂದೆ ತನ್ನ ಸಂಗ್ರಹದಲ್ಲಿದ್ದ ಅನೇಕ ಪ್ರಾಚೀನ ಕಲಾಕೃತಿಗಳನ್ನು ಸಂಸ್ಥೆಗೆ ಮಾರಾಟ ಮಾಡಿದ್ದನಂತೆ.